# ಸುದ್ದಿಸಂಚಯ

## ವಿಚಾರ ಸಂಕಿರಣ

### ಆತ್ಮಸಾಕ್ಷಾತ್ಕಾರ ಮತ್ತು ಕಾರ್ಯದಕ್ಷತೆ

**ಸಾಧಕ** ವರ್ಗದಲ್ಲಿ, ಒಂದು ಗುಂಪಿನವರು ಆತ್ಮಸಾಕ್ಷಾತ್ಕಾರಕ್ಕೇ ಹೆಚ್ಚು ಪ್ರಾಧಾನ್ಯವನ್ನು ನೀಡಿ ವ್ಯಾವಹಾರಿಕ ಜೀವನವನ್ನು ಕಡೆಗಣಿಸುತ್ತಾರೆ. ಇನ್ನೊಂದು ಗುಂಪಿನವರು—ಅವರೇ ಬಹುಮಂದಿ—ಅಧ್ಯಾತ್ಮದ ಕಡೆ ಮನಸ್ಸನ್ನು ಹರಿಸಿದರೆ ನಮ್ಮ ವ್ಯವಹಾರ ಜೀವನ ನಡೆಯುವುದಿಲ್ಲ, ನಿವೃತ್ತರಾದಮೇಲೆ ಅದರ ಕಡೆ ಗಮನ ಹರಿಸಿದರಾಯಿತು ಎಂದು ಭಾವಿಸುತ್ತಾರೆ. ಅವರು ಹೆಚ್ಚಾಗಿ ಸಾಂಪ್ರದಾಯಿಕವಾದ ಧರ್ಮವನ್ನು ಅನುಸರಿಸುತ್ತ ನಿಜವಾದ ಅಧ್ಯಾತ್ಮವನ್ನು ಕಡೆಗಣಿಸುತ್ತಾರೆ.

ಆದರೆ ಸ್ವಾಮಿ ವಿವೇಕಾನಂದರ ಆದರ್ಶ ಲೌಕಿಕ ಮತ್ತು ಅಧ್ಯಾತ್ಮಗಳೆರಡನ್ನೂ ಒಂದಾಗಿಸುವುದು. ವ್ಯಾವಹಾರಿಕ ಕಾರ್ಯದಕ್ಷತೆ ಆಧ್ಯಾತ್ಮಿಕ ಜೀವನಕ್ಕೆ ವಿರುದ್ಧವಾದುದೆ? ಆಧ್ಯಾತ್ಮಿಕ ಜೀವನ ವ್ಯಾವಹಾರಿಕ ಕಾರ್ಯದಕ್ಷತೆಯಲ್ಲಿ ಸಹಾಯಕವಾಗುವುದೆ? ಇಂತಹ ಬಹುಮುಖ್ಯವಾದ ಪ್ರಶ್ನೆಗಳು ಅನೇಕರನ್ನು ಕಾಡುತ್ತವೆ. ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಉಪದೇಶಗಳ ಬೆಳಕಿನಲ್ಲಿ ಈ ವಿಷಯವನ್ನು ಚರ್ಚಿಸಲು ಒಂದು ವಿಚಾರ ಸಂಕಿರಣವನ್ನು ಮೈಸೂರು ರಾಮಕೃಷ್ಣ ಆಶ್ರಮದಲ್ಲಿ ಏರ್ಪಡಿಸಲಾಗಿತ್ತು—ದಿನಾಂಕ ೯.೯.೨೦೦೧ ಭಾನುವಾರದಂದು. ಸುಮಾರು ೪೦೦ ಜನ ಭಕ್ತರು ಭಾಗವಹಿಸಿದ್ದರು.

ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದರು ವಿಚಾರ ಸಂಕಿರಣದಲ್ಲಿ ಮಾತನಾಡಿದ ಸ್ವಾಮಿಗಳೆಲ್ಲರನ್ನೂ ಸಭಿಕರನ್ನೂ ಸ್ವಾಗತಿಸುತ್ತ ವಿಷಯವನ್ನು ಸಭೆಗೆ ಪರಿಚಯಿಸಿಕೊಟ್ಟರು. ಬೇಲೂರು ಮಠದ ಸ್ವಾಮಿ ಆತ್ಮಪ್ರಿಯಾನಂದರು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಅನಂತರ ಸ್ವಾಮಿ ರಾಘವೇಶಾನಂದ ಮುಂತಾದವರು ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ಕೊನೆಯಲ್ಲಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಸ್ವಾಮಿ ಜಗದಾತ್ಮಾನಂದರು ಮುಕ್ತಾಯ ಭಾಷಣವನ್ನು ಮಾಡುತ್ತಾ ನಿಜವಾದ ಆಧ್ಯಾತ್ಮಿಕ ಜೀವನ ನಮ್ಮ ವ್ಯಾವಹಾರಿಕ ಜೀವನದ ಮೇಲೂ ತನ್ನ ಪ್ರಭಾವವನ್ನು ಬೀರುತ್ತದೆ, ಅದು ಜೀವನಕ್ಕೆ ಒಂದು ಸಾರ್ಥಕತೆಯನ್ನು ನೀಡಿ, ವ್ಯಕ್ತಿಯು ತನಗಾಗಿ ಮಾತ್ರವಲ್ಲದೆ ಇತರರಿಗಾಗಿಯೂ ಬಾಳುವಂತೆ ಪ್ರೇರೇಪಣೆ ನೀಡುತ್ತದೆ—ಹೀಗೆ ವ್ಯಕ್ತಿ ತಾನೂ ಉದ್ಧಾರವಾಗುವುದಲ್ಲದೆ ಸಮಾಜದ ಉದ್ಧಾರಕ್ಕೂ ಶ್ರಮಿಸುತ್ತಾನೆ ಎಂದು ಅಭಿಪ್ರಾಯಪಟ್ಟರು. ಕಾರ್ಯದಕ್ಷತೆಯೊಂದಿಗೆ ಚಾರಿತ್ರ್ಯ ದಕ್ಷತೆಯೂ ಇರಬೇಕಾದರೆ ಆಧ್ಯಾತ್ಮಿಕ ಆದರ್ಶ ಆವಶ್ಯಕ ಎಂದು ಅವರು ಒತ್ತಿ ಹೇಳಿದರು.

ಒಟ್ಟು ಎರಡು ಗಂಟೆಗಳ ವಿಚಾರ ಸಂಕಿರಣ ತುಂಬ ಆಸಕ್ತಿಪೂರ್ಣವಾಗಿತ್ತು. ಸಭಿಕರೆಲ್ಲರೂ ತಮ್ಮ ತುಂಬುಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

## ಸೇವಾಕಾರ್ಯಗಳು

ಬೆಂಗಳೂರಿನ ಅಲಸೂರು ವಿಭಾಗದಲ್ಲಿರುವ ವಿವೇಕಾನಂದ ಆಶ್ರಮವು ಪ್ರತಿತಿಂಗಳೂ ಅನೇಕ ಬಗೆಯ ಸೇವಾಕಾರ್ಯಗಳನ್ನು ನಡೆಸುತ್ತಿದೆ. ಆಗಸ್ಟ್ ತಿಂಗಳಿನಲ್ಲಿ ಪಂಚವಟಿ ವಿದ್ಯಾಮಂದಿರದ ಬಡ ವಿದ್ಯಾರ್ಥಿಗಳಿಗೆ ರೂ.೬,೦೦೦/- ಬೆಲೆಯ ನೋಟ್ ಪುಸ್ತಕಗಳನ್ನು ವಿತರಣೆ ಮಾಡಲಾಯಿತು. ೩೦೦ ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆದರು.

೧೮.೮.೨೦೦೧ರಂದು ಉಚಿತ ನೇತ್ರಚಿಕಿತ್ಸಾ ಶಿಬಿರವನ್ನು ಏರ್ಪಡಿಸಲಾಗಿತ್ತು. ೨೨೪ ರೋಗಿಗಳನ್ನು ಪರೀಕ್ಷಿಸಲಾಯಿತು. ಅವರಲ್ಲಿ ೭೧ ಜನರಿಗೆ ಶಸ್ತ್ರಚಿಕಿತ್ಸೆ ನಡೆಸಲಾಯಿತು.

೧೫.೮.೨೦೦೧ರಂದು ಉಚಿತ ಬೋನ್ ಮಿನೆರಲ್ ಡೆನ್ಸಿಟಿ ಟೆಸ್ಟ್ ಶಿಬಿರವನ್ನು ಏರ್ಪಡಿಸಲಾಗಿತ್ತು. ೧೧೦ಕ್ಕೂ ಹೆಚ್ಚು ರೋಗಿಗಳು ಇದರಲ್ಲಿ ಭಾಗವಹಿಸಿದ್ದರು.

---

ಪ್ರಿಯ ಓದುಗರಿಗೊಂದು ಸದವಕಾಶ

ಓದುಗರ ಸ್ಪಂದನ

## ಆದರ್ಶ ಕುಟುಂಬ

ಸಮಾಜದ ಬಹು ಮುಖ್ಯ ಘಟಕವೇ ಕುಟುಂಬ. ಸಾಮಾಜಿಕ ಸುಸ್ಥಿತಿಗೆ ವ್ಯವಸ್ಥಿತ ಕುಟುಂಬ ಜೀವನ ಅತ್ಯಾವಶ್ಯಕ ಎಂಬುದು ಎಲ್ಲರೂ ಒಪ್ಪಿಕೊಳ್ಳುವ ವಿಷಯ. ಆದರೆ ಇಂದಿನ ತಾಂತ್ರಿಕ ಯುಗದಲ್ಲಿ, ಧಾವಂತ ಸಮಾಜದಲ್ಲಿ ಕುಟುಂಬವ್ಯವಸ್ಥೆ ಸಡಿಲವಾಗುತ್ತಿದೆ. ಇಂದಿನ ಈ ಬದಲಾದ ಪರಿಸ್ಥಿತಿಯಲ್ಲಿ ಆದರ್ಶ ಕುಟುಂಬ ಎಂದರೆ ಹೇಗಿರಬೇಕು ಎಂಬ ವಿಷಯದ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಸಹ ಓದುಗರೊಡನೆ ಹಂಚಿಕೊಳ್ಳಿ. ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಕಿರುಪ್ರಬಂಧವನ್ನು ಬರೆದು ನಮಗೆ ಕಳುಹಿಸಿಕೊಡಿ. ಪ್ರಬಂಧವು ಸುಮಾರು ೨೦೦ ಪದಗಳ ಮಿತಿಯೊಳಗೆ ಇರಬೇಕು. ಉತ್ತಮ ಪ್ರಬಂಧಗಳನ್ನು ಆಯ್ದು ವಿವೇಕ ಪ್ರಭದಲ್ಲಿ ಪ್ರಕಟಿಸಲಾಗುತ್ತದೆ. ಪ್ರಬಂಧವು ೧೫-೧೧-೨೦೦೧ ರೊಳಗೆ ನಮಗೆ ತಲುಪುವಂತೆ ಕಳುಹಿಸಬೇಕು.

ಈ ಸದವಕಾಶವನ್ನು ಉಪಯೋಗಿಸಿಕೊಂಡು ನಮ್ಮೊಂದಿಗೆ ಸಹಕರಿಸುವಿರೆಂದು ಆಶಿಸುತ್ತೇವೆ.

ಪ್ರಬಂಧವನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡಿ.

**ಸಂಪಾದಕರು,**<br>
**ವಿವೇಕಪ್ರಭ, " ಓದುಗರ ಸ್ಪಂದನ "**<br>
**ಶ್ರೀರಾಮಕೃಷ್ಣ ಆಶ್ರಮ, ಮೈಸೂರು.**